ನಮ್ಮ ಜನ್ಮಕ್ಕೆ ಆ ಮರ್ಯಾದೆ ಸಾಕು. ನಮ್ಮನೆಯವ್ರಿಗೆ ದಗಾಮೋಸಾ ಏನೂ ಗೊತ್ತಿಲ್ಲಾ. ಅಂತಾದ್ರಲ್ಲಿ ಊರ ಉಸಾಬರಿಯೇ ಬ್ಯಾಡ ಆಯ್ತು" ಆಚಾರಿಯ ಹೆಂಡತಿ ವಿವರಿಸಿದಳು.

ದಂಪತಿ ಮಿಸಳ ಬಾಜಿ ತರಿಸಿದರು. ನಾನು ಚಹಾಕ್ಕೆ ಶರಣಾದೆ.

"ಮುಂಬೈ ಫ್ಯಾಕ್ಟರಿಯವರು ನಿನಗೆ ಬರಲು ಹೇಳಿದ್ರಂತೆ..."

ತಟ್ಟೆಯೊಳಗಿನ ಪರಿಮಳದ ಮಿಸಳ್ ಪದಾರ್ಥವನ್ನು ಚಮಚೆಯಿಂದ ಕಲೆಸುತ್ತ, "ಅವರ ಕಂಪ್ನೀಲಿ ದುಡಿಯೋದಕ್ಕಲ್ಲ ನನ್ನ ಕರೆದದ್ದು. ಹದ ಹಿಡಿಯೊ ಮಜಕೂರು ಮಾತ್ರ ನಾನು ತಿಳಿಸಿ ಕೊಡ್ಬೇಕಂತೆ. ಅದ್ರಿಂದ ಅವ್ರು ಒಂದು ಯಂತ್ರ ತಯಾರು ಮಾಡ್ತಾರು. ನಾನು ಹದ ಹ್ಯಾಗೆ ಹಿಡೀತೇನೆ ಅನ್ನೋದು ನಿಜವಾಗ್ಲೂ ನನಗೇ ಗೊತ್ತಿಲ್ಲ. ತಿಳಿಸೋದು ಹ್ಯಾಂಗೆ. ಅದೇನು ಅಂದಾಜೊ ಒಳಗಿನ ಸೂಚನೆಯೊ ಗೊತ್ತಿಲ್ಲ. ದೇವ್ರು ಮೈ ಮ್ಯಾಲೆ ಬರೋದೂ ಅಲ್ಲ. ನಾನು ಸಾಲೆಗೆ ಹೋಗಿ ಆ ವಿದ್ಯೆ ಕಲ್ತಂವಲ್ಲ. ಅದಕ್ಕೊಂದು ಲೆಕ್ಕಾಚಾರ ಸೂತ್ರ ಏನೂ ಇಲ್ಲ. ಗೊತ್ತಿದ್ದಿದ್ರೆ ಹೇಳಿ ಬಿಡ್ತಿದ್ದೆ ಅನಸ್ತದೆ. ಒಲೆ ಮುಂದೆ ಹತ್ಯಾರ ಕಾಯಿಸಿದಾಗ ಏನು ಹೊಳಿತದೊ ಅದೇ ಆ ಕ್ಷಣದಲ್ಲಿ ಮಾಡ್ತೇನೆ. ರಾಶಿ ದುಡ್ಡು ಕೊಡುವಾಗ ಬ್ಯಾಡ ಅನ್ನೋದಕ್ಕೆ ನಾನು ಸಂನ್ಯಾಸಿ ಅಲ್ಲ. ಬೀಗದ ಕಸಬು ಯಾರಿಗೂ ಈಗ ಬ್ಯಾಡ ನೋಡಿ ಅದು ಮರ್ತು ಹೋಯ್ತು. ವಿದ್ಯೆ ನಶಿಸಿ ಹೋಗ್ಬಾರ್ದು. ಮೂಢನಂಬಿಕೆಯಿಂದ ನಾನು ಗುಟ್ಟು ಬಿಡೋದಿಲ್ಲ ಎಂದು ಆಪಾದಿಸಿದರು. ನನ್ನ ಕಷ್ಟ ನನಗೆ" ಎಂದ.

ಅನುಭವದ ಆಘಾತದಿಂದ ಮಂಜಾಚಾರಿ ಹೊಸ ಸತ್ಯವೊಂದನ್ನು ಕಂಡಿದ್ದಾನೆ. ಹದದ ಅನಾಮಿಕ ಅರಿವು ಮಾತ್ರ ಅವನ ಭಾಷೆಯ ಆಚೆ ಉಳಿದಿದೆ. ಅಥವಾ ಅದು ಅನುಕರಣೆಗೆ ದಕ್ಕದ ಪ್ರಕೃತಿಯ ಲೀಲೆಯ ಒಂದು ರೂಪವೂ ಆಗಿರಬಹುದು. ವ್ಯಕ್ತ ಪ್ರಕೃತಿಯ ಆಯ್ಕೆ ಆದಂತಯೇ ಪ್ರಕಟಿಸದೆ ಇರುವುದರಲ್ಲೂ ಅದು ಸ್ವತಂತ್ರವಲ್ಲವೆ? ಸ್ವತಃ ಮಂಜಾಚಾರಿಗೆ ಅದೊಂದು ವಿಸ್ಮಯವಾಗಿ ಹೋಗಿದೆ. ಈ ಎಲ್ಲ ನಿಗೂಢ ಕಲ್ಪನೆಗಳಿಂದ ಮಂಜಾಚಾರಿ ನನಗೆ ಪ್ರಾಚೀನ ಋಷಿಯಂತೆ ಕಾಣತೊಡಗಿದ. ಇನ್ನು ನನಗೆ ಹದ ಹಿಡಿಯುವ ವಿದ್ಯೆಯನ್ನು ಕಲಿಸಲು ಮಂಜಾಚಾರಿಯನ್ನು ಕೇಳಿ ಯಾವ ಪ್ರಯೋಜನವೂ ಇಲ್ಲ ಎಂದನಿಸಿತು.

ಎಲ್ಲರ ಚಹಾದ ಬಿಲ್ಲನ್ನು ನಾನೇ ಕೊಟ್ಟೆ. ನಾನು ಆಹ್ವಾನ ನೀಡುವ ಮುನ್ನವೆ ಮಂಜಾಚಾರಿ, "ಈ ಆಚಾರಿ ತನಗೇ ಗೊತ್ತಿಲ್ಲದ ಏನೋ ಮಾಡತಿದ್ದಾನೆ ನೋಡಿ. ಎಷ್ಟು ಮಜ! ಬರುವ ಬೇಸ್ತಾರ ನಿಮ್ಮನೆಗೆ ಮುದ್ದಾಂ ಬರ್ತೆವೆ" ಎನ್ನುತ್ತ ಕುಲುಮೆಯತ್ತ ಸಾಗಿದ. ನಾನು ಬೆರಗೆಂಬ ಬೆರಗಾಗಿ ನಿಂತೆ.

## ಶ್ರೀಧರ ಬಳಗಾರ

ಯಲ್ಲಾಪುರದ ಬಳಗಾರದವರಾದ ಶ್ರೀಧರ ಪ್ರಸ್ತುತ ಕುಮಟೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಕತೆ, ಕಾದಂಬರಿಕಾರರಾದ ಅವರು ಕೆಲಕಾಲ ಅಂಕಣ ಬರಹಗಳನ್ನೂ ಬರೆದಿದ್ದುಂಟು. 'ಅಧೋಮುಖ', 'ಮುಖಾಂತರ', 'ಇಳೆ ಎಂಬ ಕನಸು', 'ಒಂದು ಫೋಟೊದ ನೆಗೆಟಿವ್' ಅವರ ಪ್ರಕಟಿತ ಕಥಾ ಸಂಗ್ರಹಗಳಾಗಿವೆ. 'ಕೇತಕಿಯ ಬನ', 'ಆಡುಕಳ' ಕಾದಂಬರಿಗಳನ್ನು, 'ರಥಬೀದಿ', 'ಕಾಲಪಲ್ಲಟ' ಎಂಬ ಅಂಕಣ ಬರಹಗಳ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ.